ಹಿಂದಿರುಗುವ ಇಚ್ಛೆ ಇದ್ದಂತಿರಲಿಲ್ಲ. ಅದೂ ಇದೂ ಹರಟುತ್ತಾ ನನ್ನನ್ನೂ ಹೋಗಲು ಬಿಡದೆ ಅಲ್ಲಿಯೇ ನಿಲ್ಲಿಸಿಕೊಂಡುಬಿಟ್ಟರು. ನನ್ನ ಪುಣ್ಯಕ್ಕೆ ಚಾಕ್ಲೆಟ್ ಐಸ್‌ಕ್ರೀಂಗಿಟ್ಟಿಸಿದ ಪೋರ ಓಡಿಬಂದ. 'ದೊಡ್ಡಮ್ಮಾ, ಅಮ್ಮ ಹೇಳಿದ್ರು. ನಿಂಗೀಗ ಪ್ರೈಸ್ ಕೊಡ್ತಾರಂತೆ. ಈಗ್ಲೆ ಬರ್ಬೇಕಂತೆ' ಅಂದ. ಒಳಗೋಡಿದೆ.

'ಈಗಾಗ್ಲೇ ತುಂಬಾ ತಡವಾಗಿರುವುದರಿಂದ ಪ್ರಶಸ್ತಿಗಳನ್ನು ಮೂರು ಮೂರು ವಿಜೇತರಿಗೆ ಒಟ್ಟಿಗೇ ನೀಡಲಾಗುವುದು' ಎಂದು ಹನುಮೇಶಪ್ಪ ಮೊದಲ ಮೂರು ವಿಜೇತರ ಹೆಸರನ್ನು ಓದಿದರು. ಕಡೆಯ ಮೂರು ಮಂದಿಯ ಹೆಸರು ಬರುವ ವೇಳೆಗೆ ಸಭಾಂಗಣ ಮುಕ್ಕಾಲು ಖಾಲಿಯಾಗಿತ್ತು. ಇದ್ದವರಲ್ಲಿ ಹೆಚ್ಚಿನವರು ತೂಕಡಿಸುತ್ತಿದ್ದರು. ನಾನು ಕೊನೆಯವಳಾಗಿ ವೇದಿಕೆ ಏರಿ ಕುಳಿತೆ. ಯಾರೋ ಶಾಲು ಹೊದೆಸಿದರು. ಇನ್ಯಾರೋ ಮಂಗಮ್ಮನ ಪ್ರತಿಮೆ, ಫಲಕ ಕೈಗೆ ತುರುಕಿದರು. ಮತ್ತ್ಯಾರೋ ಹಣ್ಣಿನ ಬುಟ್ಟಿ ಮೇಲೆ ಒಂದು ಲಕೋಟೆ ಇಟ್ಟು ಉಡಿ ತುಂಬಿದರು. ಕ್ಯಾಮರಾ ದೀಪ ಹಲವಾರು ಬಾರಿ ಮಿಂಚಿ ಸ್ತಬ್ಧವಾಯಿತು. ಭುಜದಿಂದ ಕೆಳಗೆ ಜಾರುತ್ತಿದ್ದ ಶಾಲನ್ನು ಬೀಳದಂತೆ ಭುಜ ಏರಿಸಿ ಸರ್ಕಸ್ ಮಾಡುತ್ತಾ ಕೈತುಂಬಾ ಭಾರಹೊತ್ತು ವಕ್ರವಕ್ರವಾಗಿ ನಡೆಯುತ್ತಾ ಕೆಳಗಿಳಿದು ಬಂದೆ. ನನ್ನ ಜೀವನದ ಅಮೃತ ಗಳಿಗೆಯನ್ನು ಶಾಶ್ವತವಾಗಿಸಿದ ಕ್ಯಾಮರಾದವ ನನ್ನಿಂದ ಹಣ ಪಡೆದು ವಿಳಾಸ ಬರೆದುಕೊಂಡು ಫೋಟೊ ಕಳಿಸುವುದಾಗಿ ವಾಗ್ದಾನ ಮಾಡಿದ.

ಬಂಧುಗಳನ್ನೆಲ್ಲಾ ಬಸ್ಸೇರಿಸಿ ಮನೆಕಡೆ ಹೊರಟೆವು. ಎಲ್ಲರ ಮನಸ್ಸಿನಲ್ಲಿ ಕೊರೆಯುತ್ತಿದ್ದ ಕುತೂಹಲಕ್ಕೆ ಮಾತಿನ ರೂಪಕೊಟ್ಟವರು ದೊಡ್ಡಮ್ಮ.

'ಅವರು ಕೊಟ್ಟ ಕವರಲ್ಲಿ ಎಷ್ಟು ದುಡ್ಡಿತ್ತು?' ಬಸ್ಸಿನಲ್ಲಿ ಸೂಜಿ ಬಿದ್ದರೂ ಕೇಳುವಷ್ಟು ನಿಶ್ಶಬ್ದ. ಡ್ರೈವರ್ ಕೂಡ ಎಂಜಿನ್ ಆಫ್ ಮಾಡಿ ಕಿವಿ ನಿಮಿರಿಸಿ ಕುಳಿತ. ಎಲ್ಲರೂ ನನ್ನ ಉತ್ತರಕ್ಕಾಗಿ ಕಾದರು. 'ಸತ್ಯವೇ ನಮ್ಮ ತಾಯಿತಂದೆ' ಇದು ಪ್ರಾಥಮಿಕ ಶಾಲೆಯಲ್ಲಿ ನಾನು ಕಲಿತ ಪಾಠ. ಜೊತೆಗೇ ಅಂದು ಕಲಿತ ಲೆಕ್ಕದ ಪಾಠ ಸೊನ್ನೆಗೆ ಬೆಲೆ ಇಲ್ಲ ಎಂಬುದು ರಕ್ಷಣೆಗೆ ಬಂತು. ಲಕೋಟೆಯಲ್ಲಿದ್ದ ಮೊತ್ತಕ್ಕೆ ಎರಡು ಸೊನ್ನೆ ಸೇರಿಸಿ ಹೇಳಿದೆ. 'ಪರ್ವಾಗಿಲ್ವೇ. ನಾನೇನೋಂತಿದ್ದೆ. ಬೇರೆ ಕೆಲ್ಸವಿಲ್ದೆ ಏನೇನೋ ದಂಡಕ್ಕೆ ಬರಿತಾಳೆ ಅಂದ್ಕೊಂಡಿದ್ದೆ. ಜಾಣೆ ನೀನು. ಇನ್ಮೇಲೆ ಹೀಗೇ ಬರೀತಾಇರು' ಎಂದು ಆಶೀರ್ವಾದ ಮಾಡಿದರು.

ವಾರದ ಬಳಿಕ ಕ್ಯಾಮರಾದವ ಅಂಚೆ ಮೂಲಕ ಭಾವಚಿತ್ರ ಕಳುಹಿಸಿದ. ಚಿತ್ರದ ಮುಕ್ಕಾಲು ಭಾಗ ಹನುಮೇಶಪ್ಪನ ಬೆನ್ನು ಆಕ್ರಮಿಸಿತ್ತು. ಮಿಕ್ಕ ಕಾಲು ಭಾಗವನ್ನು ಹಣ್ಣಿನ ಬುಟ್ಟಿ ನೀಡುತ್ತಿದ್ದ ನಿರೂಪಕ ಅತಿಕ್ರಮಿಸಿದ್ದ. ಇಬ್ಬರ ನಡುವೆ ಹಣ್ಣಿಗಾಗಿ ಕೈಚಾಚಿದ್ದ ನನ್ನ ಕೈ ಸ್ಪಷ್ಟವಾಗಿ ಕಾಣುತ್ತಿತ್ತು! ಶೋಕೇಸಿನಲ್ಲಿದ್ದ ಮಂಗಮ್ಮನ ಪ್ರತಿಮೆ ಕಿಸಕ್ಕನೆ ನಕ್ಕಂತಾಯ್ತು!


## ಕುಮುದಾ ಪುರುಷೋತ್ತಮ್

ಹುಟ್ಟೂರು ತುಮಕೂರು. ಪದವಿ ಹಾಗೂ ಸ್ನಾತ್ತಕೋತ್ತರ ಪದವಿಯನ್ನು ಬೆಂಗಳೂರಿನಲ್ಲಿ ಪಡೆದಿದ್ದಾರೆ. 200ಕ್ಕೂ ಮೇಲ್ಪಟ್ಟು ಹಾಸ್ಯ ಲೇಖನಗಳು ಮತ್ತು ಸಣ್ಣ ಕತೆಗಳು ಕನ್ನಡದ ವಿವಿಧ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಮೂರು ಕಥಾ ಸಂಗ್ರಹ, ಮೂರು ಹಾಸ್ಯ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.